ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಇದು ತಮ್ಮ ಗೌರವದ ಪ್ರಶ್ನೆ, ಈ ಸದನದ ಗೌರವದ ಪ್ರಶ್ನೆಯಾಗಿದೆ. ಈಗ ಯಾರು ಸದನಕ್ಕೆ ಲೇಟಾಗಿ ಬಂದಿದ್ದಾರೊ, ಅವರು ಮೊದಲು ಕ್ಷಮೆಯಾಚಿಸಬೇಕು, ಅನಂತರ ಬೇಡಿಕೆಯ ಬಗ್ಗೆ ಯಾಚನೆ ಮಾಡಬೇಕು. ಅಲ್ಲಿಯವರೆಗೂ ನಾವು ಧರಣಿ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಸರಿಯಾಗಿದೆ, ನಾವು ಧರಣಿ ಮಾಡುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾವು ಒಪ್ಪುವುದಿಲ್ಲ, ಮಾನ್ಯ ಕೃಷಿ ಸಚಿವರನ್ನು ಕರೆದುಕೊಂಡು ಬರಲಿ.

ಶ್ರೀ ವಾಟಾಳ್ ನಾಗರಾಜ್: ಸಚಿವರು ಬರಲಿ, ಇದು ಏನು ಬೇಜವಾಬ್ದಾರಿನಾ.. ಇದು ಸದನವೊ, ಏನೆಂದು ತಿಳಿದುಕೊಂಡಿದ್ದೀರಿ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಜೆ.ಸಿ.ಮಾಧುಸ್ವಾಮಿಯವರು ಹಾಗೂ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಧರಣಿ ಮಾಡಲು ಸದನದ ಬಾವಿಗೆ ಬರುತ್ತಿದ್ದರು)

ಅಧ್ಯಕ್ಷರು: ಈಗ ಸದನವನ್ನು ಕಾಲು ಗಂಟೆಗಳ ಕಾಲ ಮುಂದೂಡಲಾಗಿದೆ.

(ಸದನವು ಪುನಃ ಸಂಜೆ 4–20 ಗಂಟೆಗೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಜೆಡಿ(ಯು) ಪಕ್ಷದ ಮಾನ್ಯ ಸದಸ್ಯರುಗಳಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀಮತಿ ನಾಗಮಣಿ ನಾಗೇಗೌಡ, ಸಿ.ಪಿ.ಐ.(ಎಂ) ಪಕ್ಷದ ಸದಸ್ಯರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಮತ್ತು ಕನ್ನಡ ಚಳವಳಿ ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್ರವರು ಸದನದ ಬಾವಿಯಲ್ಲಿ ಇದ್ದರು)

ಅಧ್ಯಕ್ಷರು: ಮಾನ್ಯ ಕೃಷಿ ಸಚಿವರು ಸದನಕ್ಕೆ ಬಂದಿದ್ದಾರೆ. ಮಾನ್ಯ ಕೃಷಿ ಸಚಿವರೆ, ತಾವು ಸಕಾಲಕ್ಕೆ ತಮ್ಮ ಇಲಾಖೆಯ ಬಗ್ಗೆ ಬೇಡಿಕೆ ಮಂಡನೆ ಮಾಡುವುದಕ್ಕೆ ಬರುವುದಿಲ್ಲ.

(ಸದನದ ಬಾವಿಯಿಂದ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದರು)

ಅಧ್ಯಕ್ಷರು: ಮಾನ್ಯ ಕೃಷಿ ಸಚಿವರು ಸಭೆಯ ಯಾಚನೆ ಮಾಡ ಬೇಕೆಂದು ನಾನು ಸೂಚನೆ ನೀಡುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಮನೆಯ ವಿಚಾರದಲ್ಲಿ ನನಗೆ ಅಪಾರವಾದ ಗೌರವವಿದೆ. ನಾನು ಯಾವುದೋ ಒಂದು ಸಭೆಯನ್ನು ಮುಗಿಸಿಕೊಂಡು ಬರುವುದಕ್ಕೆ ಐದು ಹತ್ತು ನಿಮಿಷ ತಡವಾಯಿತು. ಆದ್ದರಿಂದ, ನಾನು ಕೂಡ ವಿರೋಧ ಪಕ್ಷದಲ್ಲಿದ್ದು ಕೊಂಡು 5 ವರ್ಷ ಕೆಲಸ ಮಾಡಿದ್ದೇನೆ. ನನಗೂ ಕೂಡ ಆ ಕಷ್ಟ ಸುಖಗಳು ಏನು ಎನ್ನುವುದು ಗೊತ್ತಿದೆ. ಗೊತ್ತಿಲ್ಲದೆ ನಾನೇನು ಉದ್ದೇಶ ಪೂರ್ವಕವಾಗಿ ತಡ ಮಾಡಿ ಬಂದಿಲ್ಲ. ಹಾಗಾಗಿ ಇವತ್ತು ನಾನು ಸದನಕ್ಕೆ ಸ್ವಲ್ಪ ನಿಧಾನವಾಗಿ ಬಂದಿದ್ದರಿಂದ ನಾನು ತಮ್ಮ ಮುಂದೆ ಸದನಕ್ಕೆ ಕ್ಷಮೆಯಾಚಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ತೋಟಗಾರಿಕೆ ಸಚಿವರು ಸಹ ಸಭೆಗೆ ಹೇಳಬೇಕು. ಅವರು ಕೂಡ ಹೇಳುತ್ತಾರೆ ಸಭೆಗೆ ಯಾರು ದೊಡ್ಡವರಲ್ಲ. ಸ್ವಲ್ಪ ತಡೆಯಿರಿ. ಅವರು ಸ್ವಲ್ಪ ನಿಧಾನವಾಗಿ ಸಭೆಗೆ ಬಂದಿದ್ದಾರೆ. ಅವರೂ ಸಹ ಸಭೆಗೆ ಕ್ಷಮೆಯಾಚಿಸುತ್ತಾರೆ.

(ಗೊಂದಲ)

ಶ್ರೀ ಆಲಂಗೂರು ಶ್ರೀನಿವಾಸ್ (ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಸದನಕ್ಕೆ ನಾನು ಸ್ವಲ್ಪ ತಡವಾಗಿ ಬಂದೆ. ಆದ್ದರಿಂದ ನಾನು ಸದನದ ಕ್ಷಮೆಯಾಚಿಸುತ್ತೇನೆ.

ಅಧ್ಯಕ್ಷರು: ಇವತ್ತು ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಪಟ್ಟ ಡಿಮ್ಯಾಂಡ್ ಅನ್ನು ಮಾತ್ರ ಮಂಡನೆ ಮಾಡುವುದಕ್ಕೆ ಅವರಿಗೆ ಸೂಚನೆ ಕೊಡುತ್ತೇನೆ. ಇವತ್ತು 8 ಗಂಟೆ ಆಗಲಿ, 8–30 ಗಂಟೆಯಾಗಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಮಾಡಿ ಸರ್ಕಾರದಿಂದ ಉತ್ತರ ಪಡೆದು ಮುಗಿಸೋಣ. ಏಕೆಂದರೆ ಎರಡು ದಿವಸ, ಮೂರು ದಿವಸ ಹೀಗೆ ಮುಂದೆ ಹೋಗುತ್ತದೆ. ಅವರು ಕಾಯುತ್ತಾ ಕುಳಿತುಕೊಳ್ಳಬೇಕಾಗುತ್ತದೆ. ಅನೇಕರಿಗೆ ಅನೇಕ ರೀತಿಯಲ್ಲಿ ತೊಂದರೆಯಾಗುತ್ತದೆ. ಆದ್ದರಿಂದ ಇವತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಮೇಲಿನ ಬೇಡಿಕೆಯನ್ನು 8 ಗಂಟೆಯಾಗಲಿ, 8–30 ಗಂಟೆಯಾಗಲಿ ಮುಗಿಸಿಬಿಡೋಣ. ನಾಳೆ ಬೇರೆ ವಿಷಯವನ್ನು ತೆಗೆದುಕೊಳ್ಳೋಣ. ಏಕೆಂದರೆ ನೀವು ಸಹ ಅದರಲ್ಲಿ ಭಾಗವಹಿಸುವುದಕ್ಕೆ ಮತ್ತು ಮಂತ್ರಿಗಳು ಸಹ ಉತ್ತರ ಕೊಡುವುದಕ್ಕೆ ಹೀಗೆ ಎಲ್ಲ ರೀತಿಯಿಂದ

ಅನುಕೂಲವಾಗುತ್ತದೆ.

(ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು: ಹಾಗಾದರೆ ಕೃಷಿ ಮತ್ತು ತೋಟಗಾರಿಕೆ ಬೇಡಿಕೆ ಬಗ್ಗೆಎಷ್ಟು ದಿವಸ ಚರ್ಚೆ ಮಾಡುತ್ತೀರಿ?

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಬಾರದು. ಅವರು ಕೂಡ ಬಾವಿಯೊಳಗೆ ನಿಂತುಕೊಂಡು ಮಾತನಾಡುತ್ತಿದ್ದಾರೆ. ಆವರು ಅಲ್ಲಿ ನಿಂತಿರುವುದರಿಂದ ಅವರು ಕೂಡ ಮಾತನಾಡಬಾರದು. ಅದು ಕೂಡ ಸರಿಯಾದ ಕ್ರಮವಲ್ಲ. ಅವರು ಕೂಡ ಅಲ್ಲಿ ಹೋಗಿ ನಿಂತು ಕ್ಷಮೆ ಕೇಳಬೇಕಾಗುತ್ತದೆ.

ಅಧ್ಯಕ್ಷರು: ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿರುವುದು ಸರಿಯಾದ ಕ್ರಮವಲ್ಲ, ನೀವು ಸಹ ಕ್ಷಮೆ ಕೇಳಬೇಕೆಂದು ಮಾನ್ಯ ಹಿರಿಯ ಸದಸ್ಯರು ಹೇಳುತ್ತಿದ್ದಾರೆ. (ನಗು)

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದು ಕೂಡ ಸದನದ ಗೌರವಕ್ಕೆ ಚ್ಯುತಿ ಬರುತ್ತದೆ. ಹಾಗಾಗಿ ಅವರೂ ಸಹ ಕ್ಷಮೆ ಕೇಳಬೇಕಾಗುತ್ತದೆ.

ಅಧ್ಯಕ್ಷರು: ಆಯಿತು. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಎಸ್.ಎಸ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಈಗತಾನೇ ಮಂತ್ರಿಗಳಿಗೆ ತಾವೇನು ಕ್ಷಮೆಯಾಚಿಸುವುದಕ್ಕೆ ಸೂಚಿಸಿದಿರಿ, ನನ್ನ ಒಂದು ರಿಕ್ವೆಸ್ಟ್, ಏನೆಂದರೆ, ಇಡೀ ಸದನದಲ್ಲಿರುವ ಸದಸ್ಯರು ಕೂಡ ಕ್ಷಮೆ ಕೇಳಬೇಕಾಗುತ್ತದೆ. ಹಾಗಾದಾಗ ಇಲ್ಲಿ ಕೋರಂ ಆಗುತ್ತದೆ. ಮಾನ್ಯ ಸದಸ್ಯರುಗಳದ್ದು ಸಹ ದೋಷ ಇರುವುದನ್ನು ನಾವು ಇಲ್ಲಿ ನೋಡುತ್ತಿದ್ದೇವೆ. ಬಹುಶಃ ಬಹಳಷ್ಟು ಸದಸ್ಯರು ಆ ಕಡೆಯೂ ಇರುವುದಿಲ್ಲ, ಈ ಕಡೆಯೂ ಇರುವುದಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಇರುವುದಿಲ್ಲ ರೀ. ನಾನು ನೋಡಿರುವುದನ್ನು ಹೇಳುತ್ತಿದ್ದೇನೆ. ಇವತ್ತು ಇದ್ದಾರೆ. ಆದರೆ ನಿಮಗೆ ನಾನು ತೋರಿಸುತ್ತೇನೆ. ಎಷ್ಟೋ ಸಲ ಕೋರಂ ಇರುವುದಿಲ್ಲ. ಕೋರಂ ಇಲ್ಲದಿದ್ದರೆ ಎಲ್ಲ ಸದಸ್ಯರುಗಳು ಇದ್ದಾರೆಂದು ಹೇಗೆ ಅರ್ಥವಾಗುತ್ತದೆ? ಕೋರಂ ಇಲ್ಲವೆಂದು ನಾನೇ ಸ್ವತಃ ಮಾನ್ಯ ಸಭಾಧ್ಯಕ್ಷರಿಗೆ ಮನವಿ ಮಾಡಿದ್ದೇನೆ. ಕೋರಂ ಇಲ್ಲದಿರುವುದರಿಂದ ಸದನವನ್ನು ಮುಂದೂಡಿ ಎಂದು ಹೇಳಿದ್ದೇನೆ. ಬಹುತೇಕ ಸದಸ್ಯರು ಇರುವುದಿಲ್ಲ. ಹೊಸ ಸದಸ್ಯರು ಕೂಡ ಇವತ್ತು ಕಾಣುವುದಿಲ್ಲ. ಸದನದಲ್ಲಿ ಎಲ್ಲ ಸದಸ್ಯರೂ ಇರಬೇಕೆಂದು ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.

ಅಧ್ಯಕ್ಷರು: ದಯಮಾಡಿ ಬಾವಿಯಲ್ಲಿರುವ ಸದಸ್ಯರು ತಮ್ಮ ತಮ್ಮ ಆಸನಗಳಿಗೆ ಹೋಗಬೇಕು. (ಸದನದ ಬಾವಿಯಲ್ಲಿದ್ದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಆಸನಗಳಿಗೆ ಹಿಂತಿರುಗಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಶ್ರೀ ಎಸ್.ಎಸ್. ಪಾಟೀಲರ ಗಮನಕ್ಕೆ ತರುವುದೇನೆಂದರೆ, ತಾವು ಬೇಕಾದರೆ ಮೊನ್ನೆ ಮೂರು ದಿವಸಗಳ ಕಾರ್ಯಕಲಾಪದ ಅಟೆಂಡೆನ್ಸ್ ನೋಡಿ, ಈಗಲೂ ನೋಡಿ. ಪ್ರತಿ ಪಕ್ಷದಲ್ಲಿ ಎಷ್ಟು ಜನ ಸದಸ್ಯರು ಇದ್ದೇವೋ ಅಷ್ಟು ಜನ ಆಡಳಿತ ಪಕ್ಷದಲ್ಲಿ ಇರುವುದಿಲ್ಲ. ಈ ನಿಮಿಷಕ್ಕೆ ಸಹ ತಾವು ನೋಡಬಹುದು. ಆದ್ದರಿಂದ ನಾವಿಲ್ಲಿ ಕುಳಿತು ಕೋರಂ ಉಂಟುಮಾಡಿ ಸಭೆ ಮಾಡಿಸುವಂಥ ದುಸ್ಥಿತಿಗೆ ಬಂದಿದೆ. ತಾವು ಅವರ ಕ್ಷಮೆ ಕೇಳುತ್ತೀದ್ದೀರಿ ಅದನ್ನು ನಾನು ಬೆಳೆಸುವುದಕ್ಕೆ (ಮುಂದುವರಿಸುವುದಕ್ಕೆ) ಹೋಗುವುದಿಲ್ಲ. ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡುವುದೇನೆಂದರೆ, ಮುಂದಿನ ತಿಂಗಳು 5ನೇ ತಾರೀಖಿನವರೆಗೆ ಈ ಅಧಿವೇಶನ ನಡೆಯುತ್ತದೆ. ಈ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದೇವೆ. ಒಂದೊಂದು ಬೇಡಿಕೆ ಮೇಲೆ ಎರಡೆರಡು ದಿವಸ ಸುಧೀರ್ಘವಾಗಿ ಚರ್ಚೆಯಾಗದೆ ಇದ್ದರೆ ಈ ತಿಂಗಳ 15ನೇ ತಾರೀಖಿಗೇ ಅಧಿವೇಶನ ಮುಗಿದುಹೋಗುತ್ತದೆ. ಅಧಿವೇಶನ ನಡೆಯುವುದೇ ಇಲ್ಲ. ಈ demands ಬಗ್ಗೆ ವಿವರವಾಗಿ ಈ ಕಡೆ ಆ ಕಡೆ ಯಾರಿಗೆ ಆಸಕ್ತಿ ಇದೆ. ಇಷ್ಟು ಸುದೀರ್ಘವಾಗಿ ಅಧಿವೇಶನ ಮಾಡಿರುವುದರಿಂದ ನಮ್ಮ ಭಾಗದಲ್ಲಿ ಹೊಸ ಶಾಸಕರಿಗೆ ಇಲ್ಲಿ ಮಾತನಾಡುವುದಕ್ಕೆ ಒಳ್ಳೆಯ ಅವಕಾಶ ಸಿಕ್ಕಿದೆ. ಸಾಕಷ್ಟು ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ನಾವು ತಮಗೆ ವಿನಂತಿ ಮಾಡಿದ್ದೇವೆ.